ಸಿ ಸಿ 1094/2018

ಡಿ ಡಬ್ಲ್ಯೂ- 1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕಃ 06.12.2023

ಮುಖ್ಯ ವಿಚಾರಣೆಃ- ಶ್ರೀ ಸಿ ವಿ ಪಿ ಆರೋಪಿ ಪರ ವಕೀಲರಿಂದ

ಫಿರ್ಯಾದಿಯು ನಮ್ಮ ಊರಿನವರಾಗಿದ್ದರಿಂದ ನನಗೆ ಪರಿಚಯ ಇದೆ. ನಾನು ಹೋಟೇಲ್ ಮತ್ತು ಚಿಲ್ಲರೆ ಅಂಗಡಿಯನ್ನು ಹೊಂದಿರುತ್ತೇನೆ. ನಿ ಪಿ 1 ನನ್ನ ಹೆಂಡತಿಯ ಬ್ಯಾಂಕ್ ಖಾತೆಯದ್ದಾಗಿರುತ್ತದ್ದೆ. ನಿ ಪಿ 1ಕ್ಕೆ ಮತ್ತು ನನಗೆ ಯಾವುದೇ ಸಂಬಂಧವಿಲ್ಲ. ನನ್ನ ಹೆಂಡತಿಯ ಅಂದರೆ 1 ನೇ ಆರೋಪಿಯ ಬ್ಯಾಂಕ್ ಖಾತಾ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ನಾನಾಗಲೀ ಅಥವಾ ನನ್ನ ಹೆಂಡತಿ 1 ನೇ ಆರೋಪಿಯಾಗಲೀ ಫಿರ್ಯಾದಿಯಿಂದ ಮಾರಾಟ ಮಾಡಿದ ಮನೆಯನ್ನು ವಾಪಸ್ಸು ಬರೆಸಿಕೊಳ್ಳುವ ಸಲುವಾಗಿ ಯಾವುದೇ ಸಾಲವನ್ನು ಪಡೆದಿರುವುದಿಲ್ಲ. ನಾನಾಗಲೀ ಅಥವಾ ನನ್ನ ಹೆಂಡತಿ 1 ನೇ ಆರೋಪಿಯಾಗಲೀ ಫಿರ್ಯಾದಿಯಿಂದ 5,50,000/- ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿಲ್ಲ. ಸದರಿ ಸಾಲದ ಬಾಬ್ತು ನಾನು ಯಾವುದೇ ಚೆಕ್ ನ್ನು ನೀಡಿರುವುದಿಲ್ಲ. ನನಗೆ ಫಿರ್ಯಾದಿಯಿಂದ ಸಾಲವನ್ನು ಪಡೆಯುವ ಯಾವುದೇ ದರದ್ದು ಇರಲಿಲ್ಲ.

ಫಿರ್ಯಾದಿಗೆ 5,50,000/- ರೂಪಾಯಿಗಳ ಸಾಲವನ್ನು ನೀಡುವಷ್ಟು ಆರ್ಥಿಕವಾಗಿ ಸಮಾರ್ಥ್ಯವಿಲ್ಲ. ನಿ ಪಿ 1 ರಲ್ಲಿರುವ ಸಹಿ ನನ್ನದ್ದಲ್ಲ. ನ್ಯಾಯಾಲಯದಿಂದ ನೋಟೀಸ್ ಬಂದ ನಂತರ ನಾನು ನನ್ನ ಹೆಂಡತಿ ಅಂದರೆ 1 ನೇ ಆರೋಪಿಯನ್ನು ವಿಚಾರಿಸಿದಾಗ 1 ನೇ ಆರೋಪಿಯು ಅಂಗಡಿಯಲ್ಲಿಟ್ಟಿದ್ದ ಚೆಕ್ ನ್ನು ಯಾರೋ ತೆಗೆದುಕೊಂಡು ಹೋಗಿರಬಹುದು ಎಂದು ನನಗೆ ತಿಳಿಸಿರುತ್ತಾರೆ. ಫಿರ್ಯಾದಿಯು ನನ್ನ ಅಂಗಡಿಗೆ ಬರುತ್ತಿದ್ದ. ನನ್ನ ಹೆಂಡತಿ 1 ನೇ ಆರೋಪಿಯು ಈಗ್ಗೆ ಸುಮಾರು ಏಳುವರೆ ತಿಂಗಳುಗಳ ಹಿಂದೆ ಮೃತಪಟ್ಟಿರುತ್ತಾಳೆ. ನಾನು ಫಿರ್ಯಾದಿಗೆ ಯಾವುದೇ ಹಣವನ್ನು ನೀಡಬೇಕಾಗಿಲ್ಲ. ನನ್ನ ಮತ್ತು ಫಿರ್ಯಾದಿಯ ನಡುವೆ ಜಮೀನಿನ ರಸ್ತೆಯ ವಿಚಾರವಾಗಿ ಜಗಳ ನಡೆದಿದ್ದು ಆ ದ್ವೇಷದಿಂದ ಫಿರ್ಯಾದಿಯು ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿರುತ್ತಾನೆ. ಆದುದರಿಂದ ಈ ಪ್ರಕರಣವನ್ನು ವಜಾಗೊಳಿಸಿ ದೋಷಮುಕ್ತಗೊಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು ಃ- ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

ಸಹಿ/-

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.